# ಕ್ರಿಸ್‌ಮಸ್ ಮರದ ಚರಿತ್ರೆ

ಸಂಗ್ರಹ : ಸುನಯನ ವಾಲ್ಟರ್ಸ್



ಕ್ರಿಸ್‌ಮಸ್ ಮರವೆಂದರೆ ಕಣ್ಣಮುಂದೆ ಬರುವುದು – ಹಚ್ಚಹಸಿರಾದ, ಸುಲಭವಾಗಿ ಬಾಡಿಹೋಗದ ಸೂಚಿ ಪರ್ಣಮರ. ಅದರ ತುಂಬಾ ವರ್ಣಮಯ ಅಲಂಕಾರ. ಮಂದ ಪ್ರಕಾಶದ ಕಣ್ಣು ಮಿಟುಕಿಸುವ ವಿದ್ಯುತ್ ಬಲ್ಬ್‌ಗಳು. ಮರಗಳ ಅಭಾವ ಮತ್ತು ಪ್ರಕೃತಿ ನಾಶನದ ಪ್ರಜ್ಞೆ ಹಾಗೂ ಹೆಚ್ಚಾದ ವ್ಯಾಪಾರೀಕರಣದಿಂದಾಗಿ ಈಗೀಗ ನೈಜವಾಗಿ ಕಾಣುವ ಪ್ಲಾಸ್ಟಿಕ್‌ನಂತಹ ಕೃತ್ರಿಮ ಮರಗಳೇ ಹೆಚ್ಚು. ಸುಮಾರು 50 ವರ್ಷಗಳ ಹಿಂದೆ ನಾವು ಕಂಡಂತೆ ಕ್ರಿಸ್‌ಮಸ್ ಮರದ ರೂಪ ಬೇರೆ ಇತ್ತು. ನೈಜ ಮರದ ಅಥವಾ ಮರದ ಕೊಂಬೆಯಿಂದ ಮಾಡಿದ ಕ್ರಿಸ್‌ಮಸ್ ಮರದ ತುಂಬಾ ಮೇಣದ ಬತ್ತಿಯ ಪ್ರಕಾಶ, ಅಲಂಕರಣಕ್ಕೆ ಮಿಂಚುವ ಕಾಗದದಿಂದ ಸುತ್ತಿದ ಗಾಳಿಮರದ ಅಥವಾ ಇತರ ಕಾಯಿಗಳು. ವಿವಿಧ ಆಕಾರದ ವಸ್ತುಗಳು. ಕ್ರಿಸ್‌ಮಸ್‌ನ ವಿಶಿಷ್ಟ ತಿಂಡಿತಿನಿಸುಗಳನ್ನೂ ಅದಕ್ಕೆ ಜೋತುಹಾಕುವುದಿತ್ತು.

ಕ್ರಿಸ್‌ಮಸ್ ಮರದ ವಿಷಯವಾಗಿ ಯಾವುದೇ ವೇದವಾಕ್ಯದ ಆಧಾರವಿಲ್ಲದಿರುವುದರಿಂದ ಕೆಲವು ಜನ ಈ ಪದ್ಧತಿಯನ್ನು ವಿರೋಧಿಸುವುದಿದೆ. ಚರಿತ್ರೆಯಲ್ಲಿಯೂ ಸಿದ್ಧ ಆಧಾರಗಳಿಲ್ಲದಿರುವುದರಿಂದ, ಪ್ರಥಮ ದಾಖಲೆಗಳ ಆಧಾರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

ಸುಮಾರು 1000 ವರ್ಷಗಳ ಹಿಂದೆ ಪೂರ್ವ ಯುರೋಪಿನಲ್ಲಿ ಈ ಪದ್ಧತಿ ಪ್ರಾರಂಭವಾಯಿತೆನ್ನಲಾಗಿದೆ. ಮೊದಲು ಮರಗಳನ್ನು ಸರಪಳಿಗಳ ಮೂಲಕ ದೀಪಗುಚ್ಛ ಅಥವಾ ಭಾವಣಿಯ ಕೊಕ್ಕೆಗಳಿಂದ ತುದಿ ಕೆಳಗಾಗಿ ಜೋತುಬಿಡುತ್ತಿದ್ದರು.

ಮಧ್ಯಕಾಲೀನ ಜರ್ಮನಿಯಲ್ಲಿ ಮರದ ತ್ರಿಶಂಕು ಆಕೃತಿಗಳನ್ನು ತಯಾರಿಸಿ, ಮರಗಳ ರೂಪದಲ್ಲಿ ಅಲಂಕರಿಸಿ ಏದೇನ್ ತೋಟದ ಸೂಚನೆಯಾಗಿ ಇಡುತ್ತಿದ್ದರು. ಕ್ರಿಸ್‌ಮಸ್ ಆಚರಣೆಯ ಸಂದರ್ಭದಲ್ಲಿ ನಡೆಯುವ "Mystery Play"ಎನ್ನುವ ನಾಟಕದ ಪ್ರಚಾರಕ್ಕೂ ಅದನ್ನು ಬಳಸಲಾಗುತ್ತಿತ್ತು. ಅದನ್ನು ಊರು ತುಂಬಾ ಮೆರವಣಿಗೆ ಮಾಡಿ, ಕ್ರಿಸ್‌ಮಸ್ ಹಿಂದಿನ ಸಾಯಂಕಾಲ ದೇವಾಲಯಕ್ಕೆ ತರುತ್ತಿದ್ದರು.

ಕ್ರಿಸ್‌ಮಸ್ ಮರದ ಮೊದಲ ದಾಖಲೆಯು ಲಿತುವಿಯಾದ ಮುಖ್ಯ ಪಟ್ಟಣ ರೀಗಾದ ಪಟ್ಟಣ ಚೌಕಿಯಲ್ಲಿದೆ. ಇದು 1510ರದ್ದಾಗಿದ್ದು ಅಲ್ಲಿ 8 ಭಾಷೆಗಳಲ್ಲಿ ಕೊರೆದ ದಾಖಲೆಗಳಿವೆ. ಇನ್ನೊಂದು ದಾಖಲೆಯೆಂದರೆ ಜರ್ಮನಿಯ 1521ರ ಒಂದು ಚಿತ್ರ. ಇದರಲ್ಲಿ ಒಂದು ಮರದ ಮೆರವಣಿಗೆ ಸಾಗಿದ್ದು, ಬಿಷಪ್‌ನಂತೆ ಉಡುಪು ಧರಿಸಿದ ವ್ಯಕ್ತಿಯೊಬ್ಬನು ಹಿಂದಿನಲ್ಲಿ ಕುದುರೆ ಏರಿ ಹೋಗುವ ದೃಶ್ಯವಿದೆ. ಇವನು ಸಂತ ನಿಕೊಲಸರನ್ನು ಪ್ರತಿನಿಧಿಸುತ್ತಿರುವನೆಂದು ಊಹಿಸಲಾಗಿದೆ.

ಕ್ರಿಸ್‌ಮಸ್ ಮರವನ್ನು ಮನೆಯೊಳಗೆ ತಂದ ಪ್ರಥಮ ವ್ಯಕ್ತಿ, ಕ್ರೈಸ್ತ ಆಂದೋಲನದ ರೂವಾರಿ, "ನಂಬಿಕೆಯ ಮೂಲಕ ಪ್ರತಿಪಾದನೆ"ಯನ್ನು ಎತ್ತಿ ಹಿಡಿದ, 16ನೇ ಶತಮಾನದ ಮಾರ್ಟಿನ್ ಲೂಥರರೆನ್ನಲಾಗಿದೆ. ಈ ಕುರಿತು ಚಿಕ್ಕದೊಂದು ಕಥೆ ಇದೆ. ಕ್ರಿಸ್‌ಮಸ್ ಹಿಂದಿನ ರಾತ್ರಿ, ಕಾಡು ಪ್ರದೇಶದಲ್ಲಿ ನಡೆದು ಹೋಗುತ್ತಿದ್ದ ಲೂಥರರು ಕಣ್ಣೆತ್ತಿ ಒಂದು ಸೂಚಿಪರ್ಣ ವೃಕ್ಷದೆಡೆಗೆ ನೋಡಿದಾಗ ಆ ವೃಕ್ಷದ ಕೊಂಬೆಗಳ ಮೂಲಕ ನಕ್ಷತ್ರಗಳನ್ನು ಕಂಡರು. ಆ ದೃಶ್ಯವು ಎಷ್ಟೊಂದು ಸುಂದರವಾಗಿತ್ತೆಂದರೆ, ಅವರು ಆ ಮರದ ಕೊಂಬೆಯನ್ನು ಮನೆಗೆ ಕೊಂಡುಹೋಗಿ ಮಕ್ಕಳಿಗೆ ಹೇಳಿದರಂತೆ – "ಅದು ನನಗೆ ಯೇಸುವಿನ ನೆನಪು ತಂದಿತು. ಆತನು ಪರಲೋಕದ ನಕ್ಷತ್ರಗಳನ್ನು ಭೂಮಿಗೆ ಕಳಿಸಿರುವಂತೆ ಭಾಸವಾಯಿತು." ಪ್ರಾರಂಭದಲ್ಲಿ ಜರ್ಮನಿಯಲ್ಲಿ ಮರಗಳನ್ನು ತಿಂಡಿತಿನಿಸುಗಳಿಂದ, ಬ್ರೆಡ್, ಚಿನ್ನದ ಹೊದಿಕೆಯ ಸೇಬು, ಬಣ್ಣಕಾಗದ, ಸಿಹಿತಿಂಡಿಗಳಿಂದ ಅಲಂಕರಿಸುತ್ತಿದ್ದರೆನ್ನಲಾಗಿದೆ.

ಇನ್ನೊಂದು ಕಥೆಯ ಪ್ರಕಾರ ಕ್ರೆಡಿಟನ್‌ನ (UK) ಸಂತ ಬೋನಿಫಸ್‌ರವರು ಜರ್ಮನಿಯ ಕಾಡುಗುಡ್ಡದ ಜನರಿಗೆ ಸುವಾರ್ತೆ ಸಾರಲು ಹೋದಾಗ, ಕೆಲವು ವಿಗ್ರಹಾರಾಧಕರು ಒಂದು ಓಕ್ ಮರದ ಆರಾಧನೆಯ ಅಂಗವಾಗಿ ಬಾಲಕನೊಬ್ಬನನ್ನು ಬಲಿಕೊಡಲು ಉದ್ಯುಕ್ತರಾಗಿದ್ದುದನ್ನು ಕಂಡರು. ಕ್ರುದ್ಧರಾದ ಅವರು ಆ ಮರವನ್ನು ಕಡಿದುಹಾಕಿದರು. ಆಶ್ಚರ್ಯಜನಕವಾಗಿ ಒಂದು ಸೂಚಿಪರ್ಣ ಮರವು ಆ ಬುಡದಿಂದ ಹುಟ್ಟಿಬಂದಾಗ ಅವರು – ಇದು ಕ್ರೈಸ್ತಜೀವನದ ಚಿಹ್ನೆ ಎಂದುಕೊಂಡರು. ಅವರು ರಾತ್ರಿ ಸಮಯದಲ್ಲಿ ಬೋಧಿಸಲು ಅನುಕೂಲವಾಗುವಂತೆ ಅವರ ಹಿಂಬಾಲಕರು ಆ ಮರವನ್ನು ಮೇಣದ ಬತ್ತಿಗಳಿಂದ ಅಲಂಕರಿಸಿದರೆನ್ನಲಾಗಿದೆ.

ಇಂಗ್ಲೆಂಡಿಗೆ ಕ್ರಿಸ್‌ಮಸ್ ಮರವು 1830ರ ಸುಮಾರು ಬಂದಿತು. 1841ರಲ್ಲಿ ರಾಜಕುಮಾರ ಆಲ್ಬರ್ಟ್ (ವಿಕ್ಟೋರಿಯ ರಾಣಿಯ ಜರ್ಮನ್ ಪತಿ) ವಿಂಡ್ಸರ್ ಕೋಟೆಯಲ್ಲಿ ಕ್ರಿಸ್‌ಮಸ್ ಮರವನ್ನಿಟ್ಟನು. ಅಲ್ಲಿಂದೀಚೆಗೆ ಬ್ರಿಟಿಷರ ಕ್ರಿಸ್‌ಮಸ್‌ಗಳಲ್ಲಿ ಕ್ರಿಸ್‌ಮಸ್ ಮರವು ಭಾಗಪಡೆಯಿತು. ಈಗ ಸ್ಪೈನ್, ಇಟಲಿ ಮತ್ತು ಲ್ಯಾಟಿನ್ ಅಮೆರಿಕದ ಕೆಲವು ಭಾಗಗಳನ್ನು ಹೊರತುಪಡಿಸಿ, ಎಲ್ಲಾ ಕಡೆಗಳಲ್ಲಿ ಕ್ರಿಸ್‌ಮಸ್ ಮರಗಳು ಕ್ರಿಸ್‌ಮಸ್ ಹಬ್ಬದ ಅವಿಭಾಜ್ಯ ಅಂಗಗಳಾಗಿವೆ.

ಸಾಮಾನ್ಯವಾಗಿ ಡಿಸೆಂಬರ್ 23ರಿಂದ ಜನವರಿ 6–7ರ ವರೆಗೆ ನಮ್ಮೊಂದಿಗೆ ಕ್ರಿಸ್‌ಮಸ್ ಮರ ಇರುತ್ತದೆ. ಕೆಲವರು ಹೊಸವರ್ಷ ಬರುವ ಗಳಿಗೆಯಲ್ಲಿ ಅದನ್ನು ತೆಗೆದು ಸುಡುವುದೂ ಇದೆ. ಇನ್ನು ಕೆಲವೆಡೆ ಜನವರಿ ಅಥವಾ ಫೆಬ್ರವರಿ ತಿಂಗಳ ಕೊನೆಯವರೆಗೆ ಇಡುವುದೂ ಇದೆ ಎನ್ನಲಾಗಿದೆ. ಕ್ರೈಸ್ತರಿಗೆ ಮರಗಳು ದೇವರೊಂದಿಗಿನ ನಿತ್ಯಜೀವನದ ಸಂಕೇತಗಳಾಗಿವೆ. ಈ ವೈಭವಯುತವಾಗಿ ಅಲಂಕರಿಸಲ್ಪಟ್ಟ ಮರವು ಕ್ರಿಸ್ತನ ಜೀವದಾಯಕ ಕ್ರೂಜೆಯ ನೆನಪನ್ನು ನಮಗೆ ತರಲಿ ಮತ್ತು ಹೊಸಜೀವವು ನಮ್ಮ ಹೃದಯಗಳನ್ನು ಬೆಳಗಿ ಸಂತಸ ತರಲಿ. ■